**ದಿನಾಂಕಃ 11.08.2023 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ ಮತಿ ಆರ್.ಆರ್ ರವರಿಂದಃ**

ಮಂಗಳಗೌರಮ್ಮ ನನಗೆ ಸುಮಾರು **12** ವರ್ಷ ಪೂರ್ವದಿಂದ ಪರಿಚಯ ಇರುತ್ತಾರೆ. ಮಂಗಳಗೌರಮ್ಮ ನನ್ನ ಮನೆಗೆ ಬಂದು ಹೋಗುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಮ್ಮ ಪಕ್ಕದ ಮನೆಗೆ ಬಂದು ಹೋಗುತ್ತಿದ್ದರು ಎಂದು ಹೇಳುತ್ತಾರೆ. ಮಂಗಳಗೌರಮ್ಮ ನಮ್ಮ ಪಕ್ಕದ ಮನೆಗೆ ಬಂದು ಹೋಗುವಾಗ ನನ್ನನ್ನು ಮಾತನಾಡಿಸಿಕೊಂಡು ಹೊಗುತ್ತಿದ್ದರು. ಕೆ.ಕೃಷ್ಣಣ್ ?ಇಲ್ಲಿಗೆ ಸುಮಾರು **10** ವರ್ಷ ಪೂರ್ವದಲ್ಲಿ ಮರಣ ಹೊಂದಿರುತ್ತಾರೆ. ಸದರಿ ರವರು ಮರಣ ಹೊಂದುವ ಪೂರ್ವದಲ್ಲಿ ಟಿ.ಬಿ ಕಾಯಿಲೆ ಯಿಂದ ಬಳಲುತ್ತಿದ್ದರು. ಸದರಿ ಕೃಷ್ಣಣ್ ರವರು ಮರಣ ಹೊಂದುವ ಪೂರ್ವದ ಒಂದು ವರ್ಷ ಹಾಸಿಗೆ ಹಿಡಿದಿದ್ದರು ಎಂದರೆ ಸರಿಯಲ್ಲ. ಕೆ.ಕೃಷ್ಣಣ್ ?ವರು ಮರಣ ಹೊಂದುವ ಪೂರ್ವದಲ್ಲಿ ಹಾಸಿಗೆ ಹಿಡಿದಿರಲಿಲ್ಲ ಎಂದು ತೋರಿಸಲು ದಾಖಲೆಯನ್ನು ನ್ಯಾಯಾಲಯಕ್ಕೆ ಹಾಕಿರುತ್ತೇನೆ. ನಾನು ಹೇಳುವಂತೆ ಯಾವುದೇ ದಾಖಲೆಯನ್ನು ಹಾಜರು ಪಡಿಸಿಲ್ಲ ಆದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡ ಮರಣ ಹೊಂದುವ ಪೂರ್ವದಲ್ಲಿ ಮಂಗಳ ರವರು ಮನೆಗೆ ಬಂದು ನೋಡಿಕೊಂಡು ಹೋಗುತ್ತಿದ್ದರು. ನನ್ನ ಗಂಡ ಮರಣ ನಂತರ ಮಂಗಳ ರವರು ನನ್ನ ಮನೆಗೆ ಬಂದು ಹೋಗುವುದು ಬಿಟ್ಟಿರುತ್ತಾರೆ. ನನ್ನ ಗಂಡ ಮರಣ ಹೊಂದಿದ **2** ವರ್ಷದ ಅವಧಿವರೆಗೂ ನಾನು ರಾಮನಗರದಲ್ಲಿ ವಾಸ ಮಾಡುತ್ತಿದ್ದೆ ತದ ನಂತರ

**ಬೆಂಗಳೂರಿಗೆ ಬಂದು ವಾಸ ಮಾಡುತ್ತಿದೆದೇನೆ. ನಾನು ಬೆಂಗಳೂರಿನಲ್ಲಿ ವಾಸ ಮಾಡುತ್ತಿದ್ದ ಸಂಧರ್ಭದಲ್ಲಿ ಮಂಗಳ ನನ್ನ ಮನೆಗೆ ಬಂದು ನನ್ನ ಮನೆಗೆ ಬಂದು ಮಾತನಾಡಿಸಿಕೊಂಡು ಹೋಗುತ್ತಿದ್ದರು ಎಂದರೆ ಸರಿಯಲ್ಲ. ಮಂಗಳ ರವರು ಯಾವ ವಿಳಾಸದಲ್ಲಿ ವಾಸ ಮಾಡುತ್ತಿದ್ದ ವಿಷಯ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. ಕೃಷ್ಣಣ್ ರವರು ನನ್ನ ಹೆಸರಿಗೆ ಯಾವುದೇ ವಿಲನ್ನು ಬರೆದಿಲ್ಲ ಆದರೂ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ-17 ವಿಲ್ ಇಂಗ್ಲಿಷ್ ಭಾಷೆಯಲ್ಲಿ ಇದ್ದು ಅದನ್ನು ನನ್ನ ಮಗಳು ಕನ್ನಡ ಭಾಷೆಯಲ್ಲಿ ಓದಿ ತಿಳಿಸಿರುತ್ತಾರೆ. ನಿಡಿ-17 ವಿಲ್ ನಲ್ಲಿ ನಿರ್ಮಲ ರವರು ಕೆ.ಕೃಷ್ಣನ್ ?ರವರ ಹೆಂಡತಿ ಎಂದು ಉಲ್ಲೇಖಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ನಿಡಿ-17 ವಿಲ್ ಇದ್ದರು ಸಹ ನನ್ನ ಗಂಡನ ಪಿಚ್ಚಣಿ ಮತ್ತು ಸೇವಾ ಸೌತಲತ್ತಗಳನ್ನು ಪಡೆಯಲು ನಾನು ಕಾನೂನು ಅಡಿಯಲ್ಲಿ ಅರ್ಹಳು ಅಲ್ಲ ಎಂದರೆ ಸರಿಯಲ್ಲ.**

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಸಾಕ್ಷ್ಯವನ್ನು ಬೆರಳಚ್ಚು ಮಾಡಿಸಲಾಯಿತು)

**ಓ. ಹೇ.ಕೇ.ಸ.ಇದೆ.**

**(ಓಂಕಾರಪ್ಪ. ಆರ್.)**
**5 ನೇ ಅ.ನ.ಸಿ.ಸಿ. ನ್ಯಾಯಾಧೀಶರು,**
**ಬೆಂಗಳೂರು ನಗರ.**